ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀಃಹೆಚ್ ಆರ್ ಪಿ ವಕೀಲರಿಂದ

ಈ ದಿನಾಂಕಃ 16-09-2017 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋಧಿಸಲಾಯಿತು.

ಮುಳುಗಡೆಯಾದ ನಮ್ಮ ಮನೆಯ 02 ಪೋಟೊಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-2 ಮತ್ತು 3 ಅಂತಾ ಗುರುತಿಸಲಾಗಿದೆ. ಸಿ ಡಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-04 ಅಂತಾ ಗುರುತಿಸಲಾಗಿದೆ.

ಅರ್ಜಿಯಲ್ಲಿ ಕೋರಿದಂತೆ ಆದೇಶವಾಗಲು ಪ್ರಾರ್ಥಿಸಿಕೊಳ್ಳುತ್ತೇನೆ. .

ಪಾಟೀಸವಾಲುಃ ಎದುರುದಾರರ ಪರ ಶ್ರೀ ಸಿ ಆರ್ ಕೆ ವಕೀಲರಿಂದ ಪಾಟಿಸವಾಲುಃ

ನನ್ನ ಮನೆ ನಂ 67 ಇರುತ್ತದೆ. ಮನೆಯು ಪೂರ್ವ ಪಶ್ಚಿಮವಾಗಿ 25 ಫೂಟ ದಕ್ಷಿಣೋತ್ತರವಾಗಿ 35 ಫೂಟ ಇರುತ್ತದೆ. 8-10 ವರ್ಷದಿಂದ ಮನೆ ಹೊಳೆಯಲ್ಲಿ ಮುಳುಗತ್ತದೆ ಅಂತಾ ಸರಕಾರದವರು ಕಿಮ್ಮತ್ತು ಕಟ್ಟಿ ನನ್ನ ಮನೆಯನ್ನು ತಮ್ಮ ತಾಬಕ್ಕೆ ತೆಗೆದುಕೊಂಡಿರುತ್ತಾರೆಂದರೆ ಸರಿ ಅಲ್ಲ. ಸದರಿ ಮನೆಯನ್ನು ಅಕ್ವಾಯರ ಮಾಡುವಾಗ ಸರಕಾರದವರು ಸದರಿ ಮನೆಗೆ ಸರಿಯಾದ ಕಿಮ್ಮತ್ತು ಕಟ್ಟಿ ಹಣ ಕೊಟ್ಟಿರುತ್ತಾರೆಂದರೆ ಸಾಕ್ಷಿಯು ಕಡಿಮೆ ಪರಿಹಾರ ಹಣ ಕೊಟ್ಟಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ಸದರಿ ಮನೆಯನ್ನು ನಾನೇ ಕಟ್ಟಿಸಿರುತ್ತೇನೆ. ಆ ಮನೆ ಕಟ್ಟಿ 35 ವರ್ಷವಾಗಿರುತ್ತದೆ. ಸದರಿ ಮನೆಯನ್ನು ಕಟ್ಟಲು ಕಿಟಕಿ ಬಾಗಿಲು ಸಲುವಾಗಿ ಕಟ್ಟಿಗೆಯನ್ನು ದಾಂಡೇಲಿಯಿಂದ ತರಿಸಿರುತ್ತೇವೆ. ಸರಕಾರದವರು ನಮ್ಮ ಮನೆಯನ್ನು ಕಿಮ್ಮತ್ತು ಮಾಡುವಾಗಿ ಸಾಗುವನಿ 04 ಬಾಗಿಲು ಮತ್ತು ಕಿಟಕಿ 04 ಇದ್ದು ಬೇರೆ ಯಾವುದೇ ಕಟ್ಟಿಗೆ ಹಾಕಿರುವುದಿಲ್ಲ. ಆದೇ ರೀತಿ ಸರಕಾರದವರು ಮನೆಗೆ ಬಂದಾಗ ಸ್ಲ್ಯಾಬ್ ಮತ್ತು ಆರ್ ಸಿ ಸಿ ಇರುವುದಿಲ್ಲ ಮೇಲ ಮುದ್ದೆ ಇತ್ತು ಎಂದರೆ ಸರಿ ಅಲ್ಲ. ನಮ್ಮ ಮನೆ ಸ್ಲ್ಯಾಬ್ ಹಾಕಿದ್ದು ಇರುತ್ತದೆ. ಸದರಿ ಮನೆಗೆ 04 ಸಾಗುವನಿ ಬಾಗಿಲು ಮತ್ತು ಕಿಟಕಿ ಸಾಗುವನಿದ್ದು ಕೂಡಿಸಿ ಇರುತ್ತೇವೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತೇನೆಂದರೆ ಸರಿ ಅಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಸಹಿ/-

ಹಿರಿಯ ದಿವಾಣಿ ನ್ಯಾಯಾಧೀಶರು ಬನಹಟ್ಟಿ